ಕರ್ನಾಟಕ ಸರಕಾರ
ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ

ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ: 25-1-2015

## ಪತ್ರಿಕಾ ಪ್ರಕಟಣೆ

## ಸುಭದ್ರ ಪ್ರಜಾಪ್ರಭುತ್ವಕ್ಕೆ ಕಡ್ಡಾಯ ಮತದಾನ ಮಾಡಬೇಕು

**ಬೆಂಗಳೂರು, ಜನವರಿ 25 (ಕರ್ನಾಟಕ ವಾರ್ತೆ) :**

ಸುಭದ್ರ ಪ್ರಜಾಪ್ರಭುತ್ವಕ್ಕೆ ಎಲ್ಲಾ ನಾಗರೀಕರೂ ಕಡ್ಡಾಯ ಮತದಾನ ಮಾಡಬೇಕು. ಭಾರತ ದೇಶದ ಯುವ ಜನತೆ ಹೆಚ್ಚಿರುವುದರಿಂದ ಮುಂದಿನ ದಿನಗಳಲ್ಲಿ ವಿಶ್ವದಲ್ಲೇ ಭಾರತ ದೇಶವು ಯುವ ರಾಷ್ಟ್ರವಾಗಿ ಉನ್ನತ ಸ್ಥಾನಕ್ಕೇರಲಿದೆ. ಈ ಹಿನ್ನೆಲೆಯಲ್ಲಿ ನಮ್ಮ ದೇಶದ ಯುವಕ ಯುವತಿಯರು ಕಡ್ಡಾಯವಾಗಿ ಗುರುತಿನ ಚೀಟಿ ಪಡೆಯುವುದು ಮತ್ತು ಮತಚಲಾಯಿಸಿ ಸಧೃಡ ಪ್ರಜಾಪ್ರಭುತ್ವ ದೇಶವನ್ನು ನಿರ್ಮಾಣ ಮಾಡಬೇಕೆಂದು ರಾಜ್ಯಪಾಲ ಶ್ರೀ ವಾಜುಭಾಯಿ ರೂಡಬಾಯಿ ವಾಲಾ ಅವರು ಇಂದು ತಿಳಿಸಿದರು.

ಯುವಜನತೆ ಸಾಧನೆ ಮಾಡಬೇಕಾದರೆ ಒಂದು ನಿರ್ಧಿಷ್ಟ ಗುರಿ ಇರಬೇಕು. ಯುಜನತೆ ದೇಶದ ಆಸ್ತಿ, ದೇಶ ಸಶಸ್ತ್ರಯುತವಾಗಿ ಮತ್ತು ಶಾಂತಿಯುತವಾಗಿ ಮುನ್ನಡೆಯಲು ಯುವಜನತೆಯ ಪಾತ್ರ ಬಹಳ ಮುಖ್ಯ ಎಂದು ಭಾರತ ಚುನಾವಣಾ, ಜಿಲ್ಲಾಡಳಿತ ಹಾಗೂ ಬೃಹತ್ ಬೆಂಗಳೂರು ಮಹಾನಗರಪಾಲಿಕೆ ಹಮ್ಮಿಕೊಂಡಿದ್ದ ರಾಷ್ಟ್ರೀಯ ಮತದಾನ ದಿನಾಚರಣೆ ಸಂದರ್ಭದಲ್ಲಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಚುನಾವಣಾ ಆಯೋಗದ ಆಯುಕ್ತ ಶ್ರೀ ಪಿ.ಎನ್. ಶ್ರೀನಿವಾಸಾಚಾರಿ ಅವರು 25 ನೇ ಜನವರಿ ಭಾರತ ಚುನಾವಣಾ ಆಯೋಗದ ಸಂಸ್ಥಾಪನಾ ದಿನ. ಲಕ್ಷಾಂತರ ಯುವಜನತೆ ಪ್ರತಿ ಜನವರಿಯಲ್ಲಿ ದೇಶದಾದ್ಯಂತ ನಡೆಯುವ ಮತದಾರರ ಪಟ್ಟಿಯ ಪರಿಷ್ಕರಣೆಯಲ್ಲಿ ಮತದಾರರಾಗಿ ಮಾಡಿಕೊಳ್ಳುತ್ತಿದ್ದಾರೆ. ನೀವು ಸಹ ಮಾಡಿಕೊಳ್ಳಬೇಕೆಂದರು.

ಮುಖ್ಯ ಚುನಾವಣಾಧಿಕಾರಿ ಶ್ರೀ ಅನಿಲ್ ಕುಮಾರ್ ಝಾ ಅವರು ಮಾತನಾಡಿ ಪ್ರಜಾಪ್ರಭುತ್ವವನ್ನು ಬಲಪಡಿಸಲು ಯುವಜನತೆ ಚುನಾವಣೆ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು ಮತ್ತು ತಮ್ಮ ಕುಟುಂಬದವರನ್ನು ಸ್ನೇಹಿತರನ್ನು ನೆರೆಹೊರೆಯವರನ್ನು ಕಡ್ಡಾಯವಾಗಿ ಮತದಾನ ಮಾಡಲು ಪ್ರೋತ್ಸಾಹಿಸಬೇಕೆಂದು ತಿಳಿಸಿದರು.

ವಿ/ಕೆಎಂ

## ನಿರೂಪಕರಾಗಲು ಮೊದಲು ಕೀಳರಮೆಯಿಂದ ಹೊರಬರಬೇಕು

**ಬೆಂಗಳೂರು, ಜನವರಿ 25 (ಕರ್ನಾಟಕ ವಾರ್ತೆ) :**

ನಿರೂಪಕರಾಗಲು ಬಯಸುವ ಯುವಕ-ಯುವತಿಯರು ತನ್ನಲ್ಲಿರುವ ಕೀಳರಿಮೆಯನ್ನು ತೊಡೆದು ಹಾಕಿ ಮುಂದೆ ಬರಬೇಕೆಂದು ಹಿರಿಯ ಪತ್ರಕರ್ತ ಹಾಗೂ ನಿರೂಪಕರಾದ ಲಕ್ಷ್ಮಣ್ ಹೂಗಾರ್ ಅವರು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಪರಿಶಿಷ್ಠಜಾತಿ-ಪರಿಶಿಷ್ಠ ಪಂಗಡ ಮತ್ತು ಹಿಂದುಳಿದ ವರ್ಗದ ಪದವಿ ವಿದ್ಯಾರ್ಥಿಗಳಿಗಾಗಿ ಒಂದು ವಾರ ಕಾಲ ಏರ್ಪಡಿಸಿರುವ ವೃತ್ತಿ ಹಾಗೂ ನಿರೂಪಣಾ ಕೌಶಲ್ಯ ತರಬೇತಿಯಲ್ಲಿ ನ್ಯೂಸ್ ಆ್ಯಂಕರಿಂಗ್ ಕುರಿತು ಉಪನ್ಯಾಸ ನೀಡಿದ ಅವರು ಆ್ಯಂಕರಿಂಗ್ ಆಯ್ಕೆ ಮಾಡಿಕೊಳ್ಳುವವರು ಮೊದಲು ಪತ್ರಕರ್ತರಾಗಬೇಕು. ಎಲ್ಲಾ ವಿಷಯಗಳಲ್ಲಿ ಜ್ಞಾನವನ್ನು ಪಡೆದುಕೊಳ್ಳಬೇಕು. ಯಾವುದೇ ವಿಷಯದ ಬಗ್ಗೆ ಮಾತನಾಡಬೇಕಿದ್ದರೆ ಮೊದಲು ಆ ವಿಷಯದ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳುವುದು ಅವಶ್ಯಕವೆಂದರು.

ಹಿಂದೆ ಆ್ಯಂಕರ್‌ಗಳು ಪತ್ರಕರ್ತರು ಬರೆದು ಕೊಟ್ಟಿದ್ದನ್ನು ಮಾತ್ರ ಓದುತ್ತಿದ್ದರು. ಆದರೆ ಇಂದಿನ ದಿನಗಳಲ್ಲಿ ಪತ್ರಕರ್ತ, ಆ್ಯಂಕರ್ ಎಲ್ಲಾ ಒಬ್ಬರೇ ಆಗಿರುವುದರಿಂದ ಪತ್ರಕರ್ತರಿಗೂ ಮೀರಿದಂತೆ ಆ್ಯಂಕರ್‌ಗಳು ವಿಷಯವನ್ನು ಗ್ರಹಿಸಿಕೊಳ್ಳಬೇಕು. ಆಧುನಿಕ ತಂತ್ರಜ್ಞಾನದ ಬೆಳವಣಿಗೆಯಿಂದಾಗಿ ಇಂದಿನ ದಿನಗಳಲ್ಲಿ ವರದಿಯನ್ನು ಶೀಘ್ರವಾಗಿ ಪ್ರೇಕ್ಷಕರಿಗೆ ತಲುಪಿಸಬಹುದಾಗಿದೆ. ಆದ್ದರಿಂದ ಭಾವಿ ಮಾಧ್ಯಮ ಪ್ರತಿನಿಧಿಗಳಾಗ ಬಯಸುವ ವಿದ್ಯಾರ್ಥಿಗಳಾದ ತಾವು ತಮ್ಮ ತಲೆಯನ್ನು ತಿಪ್ಪೆ ಗುಂಡಿಯಂತೆ ಎಲ್ಲಾ ವಿಷಯಗಳ ಕುರಿತು ಸಾಮಾನ್ಯ ಜ್ಞಾನವನ್ನು ತುಂಬಿಸಿಕೊಳ್ಳುವಂತೆ ಸಲಹೆ ನೀಡಿದರು. ಇದೇ ಸಂದರ್ಭದಲ್ಲಿ ಹಿರಿಯ ಪತ್ರಕರ್ತರಾದ ಎನ್.ಎಸ್.ಶಂಕರ್ ಅವರು ನ್ಯೂಸ್ ರಿಡಿಫೈನ್ಡ್ ಕುರಿತು ವಿದ್ಯಾರ್ಥಿಗಳಿಗೆ ಸಂಪೂರ್ಣ ಮಾಹಿತಿಯನ್ನು ನೀಡಿದರು. ಶಿಬಿರಾರ್ಥಿಗಳು ಕೊನೆಯಲ್ಲಿ ಇಬ್ಬರೂ ಪತ್ತಕರ್ತರೊಂದಿಗೆ ಸಂವಾದ ನಡೆಸಿದರು.

ತರಬೇತಿ ಕಾರ್ಯಗಾರದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಜಂಟಿ ನಿರ್ದೇಶಕರಾದ ಎನ್.ಭೃಂಗೀಶ್, ಉಪ ನಿರ್ದೇಶಕರಾದ ಡಿ.ಪಿ.ಮುರಳಿಧರ್ ಹಿರಿಯ ಸಹಾಯಕ ನಿದೇಶಕಿ(ಹೆ.ಪ್ರ.) ಪಲ್ಲವಿ ಹೊನ್ನಾಪುರ, ಉಪಸ್ಥಿತರಿದ್ದರು.

ಬಿ.ಜಿ.ಪಿ/ಸಿ.ಜಿ/ಕೆಎಂ
ಚಿತ್ರ ಶೀರ್ಷಿಕೆ:

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಪರಿಶಿಷ್ಠಜಾತಿ-ಪರಿಶಿಷ್ಠ ಪಂಗಡ ಮತ್ತು ಹಿಂದುಳಿದ ವರ್ಗದ ಪದವಿ ವಿದ್ಯಾರ್ಥಿಗಳಿಗಾಗಿ ಒಂದು ವಾರ ಕಾಲ ಏರ್ಪಡಿಸಿರುವ

ವೃತ್ತಿ ಹಾಗೂ ನಿರೂಪಣಾ ಕೌಶಲ್ಯ ತರಬೇತಿಯಲ್ಲಿ ನ್ಯೂಸ್ ಆ್ಯಂಕರಿಂಗ್ ಕುರಿತು ಪತ್ರಕರ್ತ ಹಾಗೂ ನಿರೂಪಕಾರ ಲಕ್ಷ್ಮಣ್ ಹೂಗಾರ್ ಹಾಗೂ ಎನ್.ಎಸ್. ಶಂಕರ್ ಅವರು ಚಿತ್ರದಲ್ಲಿದ್ದಾರೆ.